2019 ಕ.ತೀ.ವ 764

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಿ. ನರೇಂದರ್

ಮಾಲೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ ಮತ್ತು ಇನ್ನೊಬ್ಬರು
–ವಿರುದ್ಧ– ಸಹಕಾರ ಸಂಘಗಳ ಸಹಾಯಕ ನಿಬಂಧಕರು ಮತ್ತು ಇನ್ನೊಬ್ಬರು*

ಭಾರತ ಸಂವಿಧಾನದ 226ನೇ ಮತ್ತು 227ನೇ ಅನುಚ್ಛೇದಗಳ ಅಡಿಯಲ್ಲಿನ ರಿಟ್ ಅರ್ಜಿ.

ಕರ್ನಾಟಕ ಸಿವಿಲ್ ಸೇವಾ ನಿಯಮಗಳು, 1960ರ 31(4)(ಎ) ನಿಯಮ.

ಇದರಲ್ಲಿನ ಪ್ರತ್ಯರ್ಜಿದಾರ ಸಂಖ್ಯೆ: 2 ಇವರ ಪರವಾಗಿ ಆದೇಶಿಸಲಾದ ವಿವಾದ ಸಂಖ್ಯೆ: 03/2017–18ರಲ್ಲಿ, ದಿನಾಂಕ: 28.09.2018ರಂದು ಪ್ರತ್ಯರ್ಜಿದಾರ ಸಂಖ್ಯೆ: 1 ಇವರು ಹೊರಡಿಸಿದ ಆದೇಶದ ಕಾರ್ಯಾಚರಣೆ ಮತ್ತು ಜಾರಿಯ ತಡೆಗೆ ಕೋರಿ, ಮತ್ತು ಆ ಮೂಲಕ ವಿಚಾರಣಾ ಅಧಿಕಾರಿಗಳ ನಿರ್ಣಯವನ್ನು ಹಾಗೂ ಪ್ರತ್ಯರ್ಜಿದಾರ ಸಂಖ್ಯೆ: 2 ಇವರ ವಿರುದ್ಧ ಅರ್ಜಿದಾರ–ಸಂಘವು ಹೊರಡಿಸಿದ ವಜಾ ಆದೇಶವನ್ನು ತಳ್ಳಿಹಾಕಿ, ಐ.ಎ. ಸಂಖ್ಯೆ: 1ರಲ್ಲಿ, ಕರ್ನಾಟಕ ಅಪೀಲು ನ್ಯಾಯಾಧಿಕರಣ, ಬೆಂಗಳೂರು ಇವರು ನೀಡಿದ ಆದೇಶದಿಂದ ಬಾಧಿತರಾಗಿ ಅರ್ಜಿದಾರರು ಈ ನ್ಯಾಯಾಲಯದ ಮುಂದೆ ಬಂದಿದ್ದಾರೆ.

ಪ್ರತ್ಯರ್ಜಿದಾರ ಸಂಖ್ಯೆ: 2 ಈಕೆಯನ್ನು ಕೆಲಸದಿಂದ ವಜಾಗೊಳಿಸಿ, ಆರೋಪಗಳ ಆರೋಪಣೆಯನ್ನು ನೀಡಲಾಗಿದೆ; ಆಕೆಯ ಮೇಲೆ ಒಟ್ಟು 10 ಆರೋಪಗಳನ್ನು ಮಾಡಲಾಗಿದ್ದು, ಸ್ಥಳೀಯ ವಿಚಾರಣೆಯ ನಂತರ, ವಿಚಾರಣಾ ಅಧಿಕಾರಿಯು,

*ರಿಟ್ ಅರ್ಜಿ ಸಂಖ್ಯೆ: 53266/2018 ಮತ್ತು ಇತರೆ, ದಿನಾಂಕ 5ನೇ ಡಿಸೆಂಬರ್, 2018.

10 ಆರೋಪಗಳಲ್ಲಿ 7 ಆರೋಪಗಳು ಸಾಬೀತಾಗಿವೆ ಎಂದು ನಿರ್ಣಯಿಸಿದ್ದಾರೆ ಎಂಬುದು ಮೊಕದ್ದಮೆಯ ಸಂಗತಿಯಾಗಿದೆ.

ಅರ್ಜಿದಾರರು, ಕರ್ನಾಟಕ ಸಿವಿಲ್ ಸೇವಾ ನಿಯಮಗಳು, 1960ರ 31(4)ನೇ ನಿಯಮದ ಅಡಿಯಲ್ಲಿ ಕಡ್ಡಾಯವಾಗಿರುವಂತೆ, ಯಾವುದೇ ವಿಚಾರಣೆಯನ್ನು ನಡೆಸದೆ ಮತ್ತು ಅಹವಾಲು ಹೇಳಿಕೊಳ್ಳುವ ಅವಕಾಶವನ್ನು ನೀಡದೆ ಆದೇಶ ಹೊರಡಿಸಲಾಗಿದೆ ಎಂದು ಆರೋಪಿಸಿ, ಪ್ರತ್ಯರ್ಜಿದಾರ ಸಂಖ್ಯೆ 1 ಇವರನ್ನು ಸಂಪರ್ಕಿಸಿದ್ದಾರೆ ಮತ್ತು ಅದರ ಆಧಾರದ ಮೇಲೆ ಮೊದಲ ಪ್ರತ್ಯರ್ಜಿದಾರರು, ಜೀವನ ನಿರ್ವಹಣಾ ಭತ್ಯೆಯನ್ನು ಸಂದಾಯ ಮಾಡದಿರುವುದು ವಿಚಾರಣೆ ಮತ್ತು ನಿರ್ಣಯವನ್ನು ನಿರರ್ಥಕಗೊಳಿಸಿದೆ ಎಂಬ ಏಕೈಕ ಕಾರಣದ ಮೇಲೆ ತೀರ್ಪನ್ನು ನೀಡಲು ಕ್ರಮ ಜರುಗಿಸಿದ್ದಾರೆ. ಇದರಿಂದ ಬಾಧಿತರಾಗಿ, ಅರ್ಜಿದಾರರು ಕರ್ನಾಟಕ ಅಪೀಲು ನ್ಯಾಯಾಧಿಕರಣದ ಮುಂದೆ ಅಪೀಲನ್ನು ಹೂಡಿದ್ದಾರೆ.

ಕರ್ನಾಟಕ ಅಪೀಲು ಪ್ರಾಧಿಕಾರವು, ಅಪೀಲನ್ನು ಅಂಗೀಕರಿಸಿ, ಜೀವನ ನಿರ್ವಹಣಾ ಭತ್ಯೆಯನ್ನು ಸಂದಾಯ ಮಾಡದಿರುವ ಏಕೈಕ ಕಾರಣದ ಮೇಲೆ ಐ.ಎ. ಸಂಖ್ಯೆ 1 ನ್ನು ತಿರಸ್ಕರಿಸಿದೆ. ಕರ್ನಾಟಕ ಅಪೀಲು ನ್ಯಾಯಾಧಿಕರಣದ ಆದೇಶದಿಂದ ಬಾಧಿತರಾಗಿ, ಅರ್ಜಿದಾರರು ಈ ನ್ಯಾಯಾಲಯದ ಮುಂದೆ ಬಂದಿದ್ದಾರೆ.

ಅರ್ಜಿದಾರರ ಪರ ನ್ಯಾಯವಾದಿಗಳು, ಅಪೀಲು ನ್ಯಾಯಾಧಿಕರಣ ಮತ್ತು ನಿಬಂಧಕರ ಮುಂದೆ ಜೀವನ ನಿರ್ವಹಣಾ ಭತ್ಯೆಯನ್ನು ಠೇವಣಿ ಮಾಡಲು ಅರ್ಜಿದಾರ-ಸಂಘವು ಮುಂದೆ ಬಂದಿತ್ತಾದರೂ, ಅದಕ್ಕೆ ಅನುಮತಿ ನೀಡಲಾಗಲಿಲ್ಲವೆಂದು ನಿವೇದಿಸಿಕೊಂಡಿದ್ದಾರೆ. ಮುಂದುವರಿದು ಅವರು, ನಿಯಮಗಳ ಅಡಿಯಲ್ಲಿ ಸಾಕ್ಷ್ಯವನ್ನು ದಾಖಲಿಸುವುದು ಕಡ್ಡಾಯವಾಗಿದ್ದು, ಆದರೆ ಅದನ್ನು ಪಾಲಿಸಿಲ್ಲವೆಂದು, ಆ ಮೂಲಕ ಪ್ರತ್ಯರ್ಜಿದಾರ ಸಂಖ್ಯೆ 1 ಇವರು ಮೂಲಭೂತ ತಪ್ಪನ್ನು ಎಸಗಿದ್ದಾರೆಂದು, ನಿವೇದಿಸಿಕೊಂಡಿದ್ದಾರೆ.

ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಜೀವನ ನಿರ್ವಹಣಾ ಭತ್ಯೆಯನ್ನು ಸಂದಾಯ ಮಾಡದೆ ಇರುವುದರಿಂದಾದ ಪರಿಣಾಮಗಳ ವಿವಾದ ಕುರಿತು ವಿವಿಧ ಮೊಕದ್ದಮೆಗಳನ್ನು ಉಲ್ಲೇಖಿಸಿದ್ದು, ಈ ವಿವಿಧ ಮೊಕದ್ದಮೆಗಳಲ್ಲಿ ನೀಡಿದ ತೀರ್ಪಿನ ನಂತರದಲ್ಲಿ ನೀಡಿದ ಮರಾಠ ಮಂಡಳ್ –ವಿರುದ್ಧ– ಚಂದ್ರಕಾಂತ್ ಬಾಬುರಾವ್ ಕದಮ್ ಮತ್ತು ಇತರರು ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ನೀಡಿದ ನಿರ್ಣಯಗಳನ್ನು ಅವಲಂಬಿಸಿದ್ದಾರೆ. ಸದರಿ ನಿರ್ಣಯವನ್ನು ಕರ್ನಾಟಕ ಅಪೀಲು ನ್ಯಾಯಾಧಿಕರಣದ ಮುಂದೆ ಉಲ್ಲೇಖಿಸಲಾಗಿದೆ ಮತ್ತು ಅಪೀಲು ನ್ಯಾಯಾಧಿಕರಣವು ಅದನ್ನು ಪರಾಮರ್ಶಿಸಲು ಸಹ ವಿಫಲವಾಗಿದೆ ಎಂದು ನಿವೇದಿಸಲಾಗಿದೆ. ಸಾಕ್ಷ್ಯವನ್ನು ದಾಖಲಿಸುವ ಅಗತ್ಯತೆಗೆ ಸಂಬಂಧಿಸಿದಂತೆ, ಈ ನ್ಯಾಯಾಲಯದ ನಿರ್ಣಯವನ್ನು ಸಹ ಅಪೀಲು ನ್ಯಾಯಾಧಿಕರಣದ ಮುಂದೆ ಮಂಡಿಸಲಾಗಿದೆಯಾದರೂ, ಅದನ್ನು ಗಮನಿಸಲಾಗಿಲ್ಲ ಮತ್ತು ಹಾಗಾಗಿ, ಪ್ರಶ್ನಿತ ಆದೇಶವು, ಗಮನ ಹರಿಸದೆ ಮಾಡಲಾಗಿರುವದರಿಂದ ನಿರರ್ಥಕವಾಗಿದೆ ಎಂದು ನಿವೇದಿಸಲಾಗಿದೆ.

ಅಪೀಲು ನ್ಯಾಯಾಧಿಕರಣದ ಮುಂದೆ ಸದರಿ ತೀರ್ಪನ್ನು ಮಂಡಿಸಲಾಗಿತ್ತು ಎಂದು ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ನ್ಯಾಯಯುತವಾಗಿಯೇ ಒಪ್ಪಿಕೊಂಡಿದ್ದಾರೆ; ಹಾಗಾಗಿ, ಪ್ರಸ್ತುತ ಮೊಕದ್ದಮೆಯಲ್ಲಿನ ಪ್ರಶ್ನಿತ ಆದೇಶವನ್ನು ಸಕಾರಣವಿಲ್ಲದ ಆದೇಶವನ್ನಾಗಿಸಿದೆ. ಆದ್ದರಿಂದ, ಪ್ರಶ್ನಿತ ಆದೇಶವನ್ನು ತಳ್ಳಿಹಾಕಬೇಕಾದ ಅಗತ್ಯವಿದೆ.

ತದನುಸಾರವಾಗಿ, ರಿಟ್ ಅರ್ಜಿಯನ್ನು ಭಾಗಶಃ ಅನುಮತಿಸಲಾಗಿದೆ. ವಿಷಯವನ್ನು ಹೊಸದಾಗಿ ಪರ್ಯಾಲೋಚಿಸಿ, ಪಕ್ಷಕಾರರು ಅವಲಂಬಿಸಿದ ತೀರ್ಪುಗಳನ್ನು ಪರಿಶೀಲಿಸಿದ ನಂತರ ಆದೇಶಗಳನ್ನು ಹೊರಡಿಸುವುದಕ್ಕಾಗಿ ಕರ್ನಾಟಕ ಅಪೀಲು ನ್ಯಾಯಾಧಿಕರಣಕ್ಕೆ ಮರಳಿ ಕಳುಹಿಸಲಾಗಿದೆ.

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. 1989 ಎಐಆರ್ (ಎಸ್‌ಸಿ) 1416*
*ಕ್ಯಾಪ್ಟನ್ ಎಮ್. ಪಾಲ್ ಅಂತೋಣಿ -ವಿರುದ್ಧ-*
*ಭಾರತ್ ಗೋಲ್ಡ್ ಮೈನ್ಸ್ ಲಿಮಿಟೆಡ್*
*ಮತ್ತು ಇನ್ನೊಬ್ಬರು (ಉಲ್ಲೇ) 5*

*2. ಎಐಆರ್ 2004 ಎಸ್‌ಸಿ 2548*
*ಇಂದ್ರ ಭಾನು ಗೌರ್ -ವಿರುದ್ಧ- ಸಮಿತಿ,*
*ಎಮ್.ಎಮ್. ಪದವಿ ಕಾಲೇಜ್ ಆಡಳಿತ ಮಂಡಳಿ*
*ಮತ್ತು ಇತರರು (ಉಲ್ಲೇ) 8*

*3. ರಿಟ್ ಅರ್ಜಿ ಸಂ. 66209/2010, ದಿನಾಂಕ 17-11-2015*
*ಮರಾಠ ಮಂಡಳ್ -ವಿರುದ್ಧ-*
*ಚಂದ್ರಕಾಂತ್ ಬಾಬುರಾವ್ ಕದಮ್ ಮತ್ತು ಇತರರು (ಉಲ್ಲೇ) 8*

ಅರ್ಜಿದಾರರ ಪರ : ಶ್ರೀ ಕೃಷ್ಣಪ್ಪ ಎನ್.ಆರ್., ನ್ಯಾಯವಾದಿಗಳು
ಪ್ರತ್ಯರ್ಜಿದಾರರ ಪರ : ಶ್ರೀ ರವೀಂದ್ರನಾಥ್ ಎಮ್., ನ್ಯಾಯವಾದಿ ಶ್ರೀಮತಿ ವಹೀದಾ, ಉಚ್ಚ ನ್ಯಾಯಾಲಯದ ಸರ್ಕಾರಿ ಪ್ಲೀಡರ್ ಪ್ರತ್ಯರ್ಜಿದಾರ 1 ಇವರ ಪರವಾಗಿ, ಪ್ರತ್ಯರ್ಜಿದಾರ 2 ಇವರ ಪರ.

## ಆಜ್ಞೆ

**ನ್ಯಾಯಮೂರ್ತಿ ಜಿ. ನರೇಂದರ್:**

ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ಕೃಷ್ಣಪ್ಪ ಎನ್.ಆರ್., ಪ್ರತ್ಯರ್ಜಿದಾರ ಸಂಖ್ಯೆ: 1 ಇವರ ಪರ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ

ಪ್ಲೀಡರ್ ಆದ ಶ್ರೀಮತಿ ವಹೀದಾ ಮತ್ತು ಪ್ರತ್ಯರ್ಜಿದಾರ ಸಂಖ್ಯೆ 2–ಆಕ್ಷೇಪಕ ಪರ ಮಾನ್ಯ ನ್ಯಾಯವಾದಿ ಶ್ರೀ ರವೀಂದ್ರನಾಥ್ ಎಮ್. ಇವರ ವಾದಗಳನ್ನು ಆಲಿಸಲಾಯಿತು.

2. ಇದರಲ್ಲಿನ ಪ್ರತ್ಯರ್ಜಿದಾರ ಸಂಖ್ಯೆ: 2 ಪರವಾಗಿ ಆದೇಶಿಸಲಾದ ವಿವಾದ ಸಂಖ್ಯೆ: 03/ 2017–18ರಲ್ಲಿ, ದಿನಾಂಕ: 28.09.2018ರಂದು ಪ್ರತ್ಯರ್ಜಿದಾರ ಸಂಖ್ಯೆ:1 ಇವರು ಹೊರಡಿಸಿದ ಆದೇಶದ ಕಾರ್ಯಾಚರಣೆ ಮತ್ತು ಜಾರಿಯ ತಡೆಗೆ ಕೋರಿ, ಮತ್ತು ಆ ಮೂಲಕ, ವಿಚಾರಣಾ ಅಧಿಕಾರಿಗಳ ನಿರ್ಣಯವನ್ನು ಹಾಗೂ ಪ್ರತ್ಯರ್ಜಿದಾರ ಸಂಖ್ಯೆ: 2 ಈಕೆಯ ವಿರುದ್ಧ ಅರ್ಜಿದಾರ–ಸಂಘವು ಹೊರಡಿಸಿದ ವಜಾ ಆದೇಶವನ್ನು ತಳ್ಳಿಹಾಕಿ, ಐ.ಎ. ಸಂಖ್ಯೆ: 1ರಲ್ಲಿ, ಕರ್ನಾಟಕ ಅಪೀಲು ನ್ಯಾಯಾಧಿಕರಣ, ಬೆಂಗಳೂರು ಇವರು ನೀಡಿದ ಆದೇಶದಿಂದ ಬಾಧಿತರಾಗಿ ಅರ್ಜಿದಾರರು ಈ ನ್ಯಾಯಾಲಯದ ಮುಂದೆ ಬಂದಿದ್ದಾರೆ.

3. ಪ್ರತ್ಯರ್ಜಿದಾರ ಸಂಖ್ಯೆ: 2 ಈಕೆಯನ್ನು ಕೆಲಸದಿಂದ ವಜಾಗೊಳಿಸಿ, ಆರೋಪಗಳ ಆರೋಪಣೆಯನ್ನು ನೀಡಲಾಗಿದೆ; ಒಟ್ಟು 10 ಆರೋಪಗಳನ್ನು ಮಾಡಲಾಗಿದ್ದು, ಸ್ಥಳೀಯ ವಿಚಾರಣೆಯ ನಂತರ, ವಿಚಾರಣಾ ಅಧಿಕಾರಿಯು, 10 ಆರೋಪಗಳಲ್ಲಿ 7 ಆರೋಪಗಳು, ಎಂದರೆ ಕ್ರಮ ಸಂಖ್ಯೆಗಳು 1, 2, 3, 5, 6, 7 ಮತ್ತು 9ರಲ್ಲಿನ ಆರೋಪಗಳು ಸಾಬೀತಾಗಿವೆ ಎಂದು ಹಾಗೂ ಕ್ರಮ ಸಂಖ್ಯೆಗಳುಳ್ಳ 4, 8 ಮತ್ತು 10ರಲ್ಲಿನ ಆರೋಪಗಳು ಸಾಬೀತಾಗಿಲ್ಲವೆಂದು ತೀರ್ಪು ನೀಡಿದ್ದಾರೆ; ಸಾಬೀತಾಗಿವೆ ಎಂದು ನಿರ್ಣಯಿಸಿದ ಆರೋಪಗಳೆಂದರೆ: ಅರ್ಜಿದಾರ–ಸಂಘದ ನಿಧಿಗಳನ್ನು ದುರುಪಯೋಗಪಡಿಸಿಕೊಂಡಿದ್ದಾಳೆ, ಸಂಘವು ಅಂಗೀಕರಿಸಿದ ಗೊತ್ತುವಳಿಯನ್ನು ಪ್ರಕ್ಷಿಪ್ತಗೊಳಿಸಿದ್ದಾಳೆ, ಲೆಕ್ಕ ಪುಸ್ತಕಗಳನ್ನು ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ತೆಗೆದುಕೊಂಡು ಹೋಗಿ ತನ್ನ ಮನೆಯಲ್ಲಿ ಸಂಗ್ರಹಿಸಿಟ್ಟಿದ್ದಾಳೆ, ಮಂಡಳಿಗೆ ಸುಳ್ಳು ಮಾಹಿತಿಯನ್ನು ನೀಡಿದ್ದಾಳೆ, ಮಂಡಳಿಯ ಸದಸ್ಯರಿಗೆ ತಪ್ಪು ಗ್ರಹಿಕೆ ಉಂಟಾಗುವಂತೆ ಮಾಡಿದ್ದಾಳೆ ಮತ್ತು ಹಾಲು ಒಕ್ಕೂಟದ ಸದಸ್ಯರೊಂದಿಗೆ ವೃತ್ತಿಯೋಗ್ಯವಲ್ಲದ ರೀತಿಯಲ್ಲಿ ವರ್ತಿಸಿದ್ದಾಳೆ ಇವು ಮೊಕದ್ದಮೆಯ ಸಂಕ್ಷಿಪ್ತ ಸಂಗತಿಗಳಾಗಿವೆ.

4. ಆರೋಪ ವರದಿಯನ್ನಾಧರಿಸಿ ವಿಚಾರಣೆಯನ್ನು ನಡೆಸಲಾಗಿದೆ ಮತ್ತು ಸೇವೆಯಿಂದ ವಜಾಗೊಳಿಸುವ ಶಿಕ್ಷೆಯನ್ನು ವಿಧಿಸಲಾಗಿದೆ ಎಂದು ವಾದಿಸಲಾಗಿದೆ. ಇದರಿಂದ ಬಾಧಿತಳಾಗಿ ಪ್ರತ್ಯರ್ಜಿದಾರ ಸಂಖ್ಯೆ: 2 ಈಕೆಯು, ಕರ್ನಾಟಕ ಸಿವಿಲ್ ಸೇವಾ ನಿಯಮಗಳು, 1960ರ 31(4)ನೇ ನಿಯಮದ ಅಡಿಯಲ್ಲಿ ಕಡ್ಡಾಯವಾಗಿರುವಂತೆ, ಯಾವುದೇ ವಿಚಾರಣೆಯನ್ನು ನಡೆಸದೆ ಮತ್ತು ಅಹವಾಲು ಹೇಳಿಕೊಳ್ಳುವ ಅವಕಾಶವನ್ನು ನೀಡದೆ ಆದೇಶ ಹೊರಡಿಸಲಾಗಿದೆ ಎಂದು ಆರೋಪಿಸಿ, ಪ್ರತ್ಯರ್ಜಿದಾರ ಸಂಖ್ಯೆ: 1 ಇವರನ್ನು ಸಂಪರ್ಕಿಸಿದ್ದಾರೆ ಮತ್ತು ಅದರ ಆಧಾರದ ಮೇಲೆ ಮೊದಲ ಪ್ರತ್ಯರ್ಜಿದಾರರು, ಜೀವನ ನಿರ್ವಹಣಾ ಭತ್ಯೆಯನ್ನು ಸಂದಾಯ ಮಾಡದಿರುವುದು ವಿಚಾರಣೆ ಮತ್ತು ನಿರ್ಣಯವನ್ನು ನಿರರ್ಥಕಗೊಳಿಸಿದೆ ಎಂಬ ಏಕೈಕ ಕಾರಣದ ಮೇಲೆ ತೀರ್ಪನ್ನು ನೀಡಲು ಕ್ರಮ ಜರುಗಿಸಿದ್ದಾರೆ. ಇದರಿಂದ ಬಾಧಿತರಾಗಿ, ಅರ್ಜಿದಾರರು ಕರ್ನಾಟಕ ಅಪೀಲು ನ್ಯಾಯಾಧಿಕರಣದ ಮುಂದೆ ಅಪೀಲನ್ನು ಹೂಡಿದ್ದಾರೆ.

5. ಕರ್ನಾಟಕ ಅಪೀಲು ಪ್ರಾಧಿಕಾರವು ವಿಷಯವನ್ನು (ಅಪೀಲನ್ನು) ಅಂಗೀಕರಿಸಿ, ಜೀವನ ನಿರ್ವಹಣಾ ಭತ್ಯೆಯನ್ನು ಸಂದಾಯ ಮಾಡದಿರುವ ಏಕೈಕ ಕಾರಣದ ಮೇಲೆ ಐ.ಎ. ಸಂಖ್ಯೆ: 1ನ್ನು ತಿರಸ್ಕರಿಸಿದೆ ಹಾಗೂ ***ಕ್ಯಾಪ್ಟನ್ ಎಮ್. ಪಾಲ್ ಅಂತೋಣಿ –ವಿರುದ್ಧ– ಭಾರತ್ ಗೋಲ್ಡ್ ಮೈನ್ಸ್ ಲಿಮಿಟೆಡ್ ಮತ್ತು ಇನ್ನೊಬ್ಬರು***[1] ಮೊಕದ್ದಮೆಯಲ್ಲಿ ನೀಡಿದ ತೀರ್ಪನ್ನು ಅವಲಂಬಿಸಿದೆ. ಕರ್ನಾಟಕ ಅಪೀಲು ನ್ಯಾಯಾಧಿಕರಣದ ಆದೇಶದಿಂದ ಬಾಧಿತರಾಗಿ, ಅರ್ಜಿದಾರರು ಈ ನ್ಯಾಯಾಲಯದ ಮುಂದೆ ಬಂದಿದ್ದಾರೆ.

6. ಅರ್ಜಿದಾರರ ಪರ ನ್ಯಾಯವಾದಿಗಳು, ಅಪೀಲು ನ್ಯಾಯಾಧಿಕರಣ ಮತ್ತು ನಿಬಂಧಕರ ಮುಂದೆ ಜೀವನ ನಿರ್ವಹಣಾ ಭತ್ಯೆಯನ್ನು ಠೇವಣಿ ಮಾಡಲು ಅರ್ಜಿದಾರ–ಸಂಘವು ಮುಂದೆ ಬಂದಿತ್ತಾದರೂ, ಅದಕ್ಕೆ ಅನುಮತಿ ನೀಡಲಾಗಲಿಲ್ಲವೆಂದು ನಿವೇದಿಸಿಕೊಂಡಿದ್ದಾರೆ. ಮುಂದುವರಿದು ಅವರು, ನಿಯಮಗಳ

1. 1999 ಎಐಆರ್ (ಎಸ್‌ಸಿ) 1416

ಅಡಿಯಲ್ಲಿ ಸಾಕ್ಷ್ಯವನ್ನು ದಾಖಲಿಸುವುದು ಕಡ್ಡಾಯವಾಗಿದ್ದು, ಆದರೆ ಅದನ್ನು ಪಾಲಿಸಿಲ್ಲವೆಂದು, ಆ ಮೂಲಕ ಪ್ರತ್ಯರ್ಜಿದಾರ ಸಂಖ್ಯೆ: 1 ಇವರು ಮೂಲಭೂತ ತಪ್ಪನ್ನು ಎಸಗಿದ್ದಾರೆಂದು, ನಿವೇದಿಸಿಕೊಂಡಿದ್ದಾರೆ. ಇದರಲ್ಲಿನ ಅಪೀಲುದಾರರು/ ಅರ್ಜಿದಾರರು ಅವಲಂಬಿಸಿರುವ ನಿರ್ಣಯಗಳ ಕುರಿತು ಅಪೀಲು ನ್ಯಾಯಾಧಿಕರಣವು ತನ್ನ ವಿವೇಚನೆಯನ್ನು ಬಳಸದೆ ಮಧ್ಯಂತರ ಅಪೀಲನ್ನು ತಿರಸ್ಕರಿಸಿರುವುದು ಅಪೀಲು ನ್ಯಾಯಾಧಿಕರಣವು ಈ ಕಡೆಗೆ ಯಾವುದೇ ಗಮನ ಹರಿಸದಿರುವುದರಿಂದ ಹೊರಡಿಸಿದ ಆದೇಶವು ನಿರರ್ಥಕವಾಗಿದೆ ಹಾಗೂ ***ಕ್ಯಾಪ್ಟನ್ ಎಮ್. ಪಾಲ್ ಅಂತೋಣಿ –ವಿರುದ್ಧ– ಭಾರತ್ ಗೋಲ್ಡ್ ಮೈನ್ಸ್ ಲಿಮಿಟೆಡ್ ಮತ್ತು ಇನ್ನೊಬ್ಬರು*** ಮೊಕದ್ದಮೆಯಲ್ಲಿನ ತೀರ್ಪನ್ನು ಅವಲಂಬಿಸಿದ ನಂತರ ನ್ಯಾಯಾಧಿಕರಣವು ಅರ್ಜಿಯನ್ನು ತಿರಸ್ಕರಿಸಿದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.

7. ಪ್ರತ್ಯರ್ಜಿದಾರ ಸಂಖ್ಯೆ: 2 ಆರೋಪಗಳ ತಪ್ಪಿತಸ್ಥಳೆಂದು ಕಂಡುಬಂದಿದೆ ಹಾಗೂ ಅಪೀಲು ನ್ಯಾಯಾಧಿಕರಣ ಮತ್ತು ಪ್ರತ್ಯರ್ಜಿದಾರ ಸಂಖ್ಯೆ: 1 ಇವರು, ಆಂತರಿಕ ವಿಚಾರಣೆಯಲ್ಲಿ ಸಾಬೀತುಪಟ್ಟಿರುವುದೆಂಬ ಆರೋಪಗಳ ತೀವ್ರತೆಯನ್ನು ವಿವೇಚಿಸಲು ವಿಫಲವಾಗಿದೆ ಎಂದು ವಾದಿಸಲಾಗಿದೆ.

8. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಜೀವನ ನಿರ್ವಹಣಾ ಭತ್ಯೆಯನ್ನು ಸಂದಾಯ ಮಾಡದೆ ಇರುವುದರಿಂದಾದ ಪರಿಣಾಮಗಳ ವಿವಾದ ಕುರಿತು, ಎಐಆರ್ 2004 ಎಸ್‌ಸಿ 248ರಲ್ಲಿ ವರದಿ ಮಾಡಿದ ***ಇಂದ್ರ ಭಾನು ಗೌರ್ –ವಿರುದ್ಧ– ಸಮಿತಿ, ಎಮ್.ಎಮ್. ಪದವಿ ಕಾಲೇಜ್ ಆಡಳಿತ ಮಂಡಳಿ ಮತ್ತು ಇತರರು*** ಮೊಕದ್ದಮೆಯಲ್ಲಿ ನೀಡಿದಂಥ ನಿರ್ಣಯವು, 9, 10 ಮತ್ತು 12ನೇ ಕಂಡಿಕೆಗಳಲ್ಲಿ, ***ಕ್ಯಾಪ್ಟನ್ ಎಮ್. ಪಾಲ್ ಅಂತೋಣಿ –ವಿರುದ್ಧ– ಭಾರತ್ ಗೋಲ್ಡ್ ಮೈನ್ಸ್ ಲಿಮಿಟೆಡ್ ಮತ್ತು ಇನ್ನೊಬ್ಬರು*** ಮೊಕದ್ದಮೆಯ ನೀಡಿದ ತೀರ್ಪಿನ ನಂತರದಲ್ಲಿ ನೀಡಿದ ತೀರ್ಪಾಗಿರುವುದರಿಂದ ಬಂಧನಕಾರಿ ಪರಿಣಾಮವನ್ನು ಹೊಂದಿದೆ ಎಂದು ಈ ನ್ಯಾಯಾಲಯವು ನಿರ್ಣಯಿಸಿದ್ದರ ಆಧಾರದ ಮೇಲೆ ***ಮರಾಠ ಮಂಡಳ್ –ವಿರುದ್ಧ– ಚಂದ್ರಕಾಂತ್ ಬಾಬುರಾವ್ ಕದಮ್ ಮತ್ತು ಇತರರು***[2] ಮೊಕದ್ದಮೆಯಲ್ಲಿ

2. ರಿಟ್ ಅರ್ಜಿ ಸಂಖ್ಯೆ: 66209/2010, ದಿನಾಂಕ: 17.11.2015

ಈ ನ್ಯಾಯಾಲಯವು ನೀಡಿದ ನಿರ್ಣಯಗಳನ್ನು ಅವಲಂಬಿಸಿದ್ದಾರೆ. ಸದರಿ ಕಂಡಿಕೆಗಳಲ್ಲಿನ ನಿರ್ಣಯವನ್ನು ಈ ಮುಂದಿನಂತೆ ಓದಲಾಗಿದೆ:

> *"9. ಆದಾಗ್ಯೂ, ಈ ತೀರ್ಪನ್ನು, ಪ್ರತ್ಯರ್ಜಿದಾರರು ಸಲ್ಲಿಸಿದ ಪೇಟೆಂಟ್ ಅಪೀಲು ಪತ್ರಗಳಲ್ಲಿ 17ನೇ ಸೆಪ್ಟಂಬರ್, 1997ರಂದು, ವಿಭಾಗೀಯ ಪೀಠವು ತಳ್ಳಿಹಾಕಿದೆ. ಇದೇ ತೀರ್ಮ ಅಪೀಲಿನ ರೂಪದಲ್ಲಿ ನಮ್ಮ ಮುಂದಿದೆ.*
>
> *10. ಪ್ರತ್ಯರ್ಜಿದಾರರು ಸ್ವತಃ ಪ್ರಾರಂಭಿಸಿರುವ ಕ್ರಿಮಿನಲ್ ಮೊಕದ್ದಮೆಯು, ಅದೇ ಸಂಗತಿಗಳ ಆಧಾರದ ಮೇಲೆ ನಡೆದ ಇಲಾಖಾ ವಿಚಾರಣೆಯೊಂದಿಗಿನ ವ್ಯವಹರಣೆಯಲ್ಲಿ ಸಮರ್ಥನೀಯವಾಗಿರಲಿಲ್ಲ ಮತ್ತು ಕ್ರಿಮಿನಲ್ ಮೊಕದ್ದಮೆಯು ಕೊನೆಗೊಳ್ಳುವವರೆಗೆ ಆ ವ್ಯವಹರಣೆಗಳಿಗೆ ತಡೆ ನೀಡಬೇಕಾಗಿತ್ತು; ಎರಡೂ ಮೊಕದ್ದಮೆಗಳಲ್ಲಿ, ಎಂದರೆ ಇಲಾಖಾ ವ್ಯವಹರಣೆಗಳಲ್ಲಿ ಮತ್ತು ಕ್ರಿಮಿನಲ್ ಮೊಕದ್ದಮೆಯಲ್ಲಿ, ಕ್ರಮದ ಆಧಾರವು, ವಸೂಲು ಮಾಡಿಕೊಳ್ಳಲಾಗಿದೆ ಎಂದು ಹೇಳಲಾಗಿದ್ದ ಅಪೀಲುದಾರರ ನಿವಾಸದಲ್ಲಿ ಪೊಲೀಸ್ ಅಧೀಕ್ಷಕರು ನಡೆಸಿದ ದಾಳಿಯಾಗಿರುವುದರಿಂದ, ಎರಡೂ ವ್ಯವಹರಣೆಗಳಲ್ಲಿನ ಸಂಗತಿಗಳು ಮತ್ತು ಸಾಕ್ಷ್ಯವು ಒಂದೇ ಆಗಿದ್ದು, ಇಲಾಖಾ ವ್ಯವಹರಣೆಗಳು ತಡೆಗೆ ಒಳಗಾಗಿದ್ದವು ಎಂಬುದು ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳ ವಾದವಾಗಿದೆ. ಈ ಸಂದರ್ಭಗಳ ಹಿನ್ನಲೆಯಲ್ಲಿ, ಅಪೀಲುದಾರ ಇಲಾಖಾ ವ್ಯವಹರಣೆಗಳಿಗೆ ತಡೆ ನೀಡಲು ಪ್ರತ್ಯರ್ಜಿದಾರರು ಕೋರಿಕೊಂಡಿರುವುದು ಸಮರ್ಥನೀಯವಾಗಿತ್ತು ಮತ್ತು ವ್ಯವಹರಣೆಗಳಿಗೆ ತಡೆ ನೀಡಲು ಪ್ರತ್ಯರ್ಜಿದಾರರ ನಿರಾಕರಣೆಯ ಆಧಾರದ ಮೇಲೆ, ಅಪೀಲುದಾರರು, ಅವರ ವಾದಕ್ಕೆ ಬಾಧಕವಾಗಬಹುದಾದ ಸಂಭವವಿದ್ದುದರಿಂದ ಆ*

*ವ್ಯವಹರಣೆಗಳಲ್ಲಿ ಭಾಗವಹಿಸದಿರುವುದು ಸಮರ್ಥನೀಯವಾಗಿತ್ತು ಎಂದು ವಾದಿಸಲಾಗಿದೆ. ಅಪೀಲುದಾರರಿಗೆ ಆರೋಗ್ಯ ಸರಿ ಇರಲಿಲ್ಲ ಮತ್ತು ಆ ಕಾರಣದಿಂದಾಗಿ ಸಹ, ಅವರು ಸಂಪೂರ್ಣವಾಗಿ ಚೇತರಿಸಿಕೊಳ್ಳುವವರೆಗೆ ಇಲಾಖಾ ವ್ಯವಹರಣೆಗಳನ್ನು ತಡೆಹಿಡಿಯಬಹುದಾಗಿತ್ತು ಎಂದು ಸಹ ವಾದಿಸಲಾಗಿದೆ. ವಜಾ ಮಾಡಲ್ಪಟ್ಟ ಅಪೀಲುದಾರರಿಗೆ ಜೀವನ ನಿರ್ವಹಣಾ ಭತ್ಯೆಯನ್ನು ಸಂದಾಯ ಮಾಡಿರಲಿಲ್ಲವೆಂದು, ಅದರ ಪರಿಣಾಮವಾಗಿ ಅವರು ತೀವ್ರ ಹಣಕಾಸು ಬಿಕ್ಕಟ್ಟುಗಳಲ್ಲಿ ಸಿಕ್ಕಿಹಾಕಿಕೊಂಡರೆಂದು ಹಾಗೂ ಕೇರಳದಲ್ಲಿನ ಅವರ ಸ್ವಂತ ಸ್ಥಳದಿಂದ ಕರ್ನಾಟಕದಲ್ಲಿರುವ ಕೋಲಾರ ಗೋಲ್ಡ್ ಫೀಲ್ಡ್ಸ್‌ಗೆ, ಇಲಾಖಾ ವ್ಯವಹರಣೆಗಳಲ್ಲಿ ಪಾಲ್ಗೊಳ್ಳುವುದಕ್ಕಾಗಿ ಯಾವುದೇ ಪ್ರಯಾಣ ಕೈಗೊಳ್ಳಲಾಗಲಿಲ್ಲವೆಂದು ನಿವೇದಿಸಿಕೊಂಡಿದ್ದಾರೆ. ವಿಭಾಗೀಯ ಪೀಠವು, ಎರಡೂ ಮೊಕದ್ದಮೆಗಳು, ಎಂದರೆ ಇಲಾಖಾ ವ್ಯವಹರಣೆಗಳು ಮತ್ತು ಕ್ರಿಮಿನಲ್ ಮೊಕದ್ದಮೆಯಲ್ಲಿನ ಸಂಗತಿಗಳು ಮತ್ತು ಸಾಕ್ಷ್ಯಗಳು ಒಂದೇ ಆಗಿದ್ದನ್ನು ಆಧರಿಸಿದ್ದವೆಂಬುದು ಸ್ಪಷ್ಟ ಸಂಗತಿಯಾಗಿದೆ ಎಂದು ಮನಗಂಡು, ಏಕ ಸದಸ್ಯ ಪೀಠ ನ್ಯಾಯಾಧೀಶರು ಹೊರಡಿಸಿದ ತೀರ್ಪಿಗೆ ವಿರುದ್ಧವಾಗಿರುವುದರಿಂದ ಸಮರ್ಥಿಸಿಲ್ಲವೆಂದು ವಾದಿಸಲಾಗಿದೆ.*

*12. ಈ ಹಿಂದೆ ಅಭಿಪ್ರಾಯಪಟ್ಟಿರುವಂತೆ, ಈ ಪ್ರಶ್ನೆಯು ನಿರಂತರ ಸ್ವರೂಪದ್ದಾಗಿದೆ ಮತ್ತು ಇದನ್ನು ಅರ್ಧಕ್ಕೂ ಹೆಚ್ಚು ಸಂದರ್ಭಗಳಲ್ಲಿ ಎತ್ತಲಾಗಿದ್ದು, ನ್ಯಾಯಿಕ ನಿರ್ಣಯಗಳ ಹೊರತಾಗಿಯಲ್ಲದೆ, ವಿಶೇಷವಾಗಿ ಈ ನ್ಯಾಯಾಲಯವು ಪ್ರಶ್ನೆಯನ್ನು ಇತ್ಯರ್ಥಗೊಳಿಸಿ, ಉತ್ತರವನ್ನು ಒದಗಿಸಿದೆ. ಆದಾಗ್ಯೂ, ಈ ಸಮಸ್ಯೆಯನ್ನು ನಿಯೋಜಕನಾಗಲಿ ಅಥವಾ ನಿಯೋಜಿತನಾಗಲಿ ಒಂದಲ್ಲ ಒಂದು ರೂಪದಲ್ಲಿ ಮುಂದಿಡುತ್ತಾರೆ. ಪ್ರಸ್ತುತ*

*ಮೊಕದ್ದಮೆಯಲ್ಲಿ, ಈಗಾಗಲೇ ವಜಾಗೊಳಿಸುವ ಆದೇಶವನ್ನು, ಅಂತಿಮವಾಗಿ ಅಪೀಲುದಾರರ ನಿರಪರಾಧ ನಿರ್ಣಯದಲ್ಲಿ ಪರಿಣಮಿಸಿದ ಕ್ರಿಮಿನಲ್ ಮೊಕದ್ದಮೆಯ ನಿರ್ಣಯಕ್ಕೆ ಮೊಕದ್ದಮೆಯ ಏಕಪಕ್ಷೀಯ ಹೊರಡಿಸಲಾಗಿದೆ. ಇತರ ಸಂದರ್ಭಗಳಿಗೆ, ವಿಶೇಷವಾಗಿ, ಮೊಕದ್ದಮೆಯ ಏಕಪಕ್ಷೀಯ ವ್ಯವಹರಣೆಗಳಿಗೆ ಸಂಬಂಧಿಸಿದ ನಿರಪರಾಧ ನಿರ್ಣಯವು, ಇಲಾಖಾ ವ್ಯವಹರಣೆಗಳನ್ನು ನಿರರ್ಥಕಗೊಳಿಸುವ ಪರಿಣಾಮವನ್ನು ಹೊಂದಿದೆಯೇ ಅಥವಾ ಅಪೀಲುದಾರರ ವಿರುದ್ಧ ಹೊರಡಿಸಲಾದ ವಜಾಗೊಳಿಸುವ ಆದೇಶವು, ಈ ಅಪೀಲಿನಲ್ಲಿ ಪರಿಗಣಿಸಬೇಕಾಗಿರುವ ಪ್ರಶ್ನೆಯಾಗಿದೆಯೇ?"*

9. ಸದರಿ ನಿರ್ಣಯವನ್ನು ಕರ್ನಾಟಕ ಅಪೀಲು ನ್ಯಾಯಾಧಿಕರಣದ ಮುಂದೆ ಉಲ್ಲೇಖಿಸಲಾಗಿದೆ ಮತ್ತು ಅಪೀಲು ನ್ಯಾಯಾಧಿಕರಣವು ಅದನ್ನು ಪರಾಮರ್ಶಿಸಲು ಸಹ ವಿಫಲವಾಗಿದೆ ಎಂದು ನಿವೇದಿಸಲಾಗಿದೆ. ಸಾಕ್ಷ್ಯವನ್ನು ದಾಖಲಿಸುವ ಅಗತ್ಯತೆಗೆ ಸಂಬಂಧಿಸಿದಂತೆ, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1959ರ 31(7)(ಎ) ನಿಯಮದ ಉಪಬಂಧಗಳ ಕಡ್ಡಾಯ ಸ್ವರೂಪವನ್ನು ಕುರಿತು ಪರಾಮರ್ಶಿಸುವ ದಿನಾಂಕ: 16.01.1997ರಂದು ನಿರ್ಣಯಿಸಿದ ರಿಟ್ ಅರ್ಜಿ ಸಂಖ್ಯೆ: 32778/1994ರಲ್ಲಿ ನೀಡಲಾದ ಈ ನ್ಯಾಯಾಲಯದ ನಿರ್ಣಯವನ್ನು ಸಹ ಅಪೀಲು ನ್ಯಾಯಾಧಿಕರಣದ ಮುಂದೆ ಮಂಡಿಸಲಾಗಿದೆಯಾದರೂ, ಅದನ್ನು ಗಮನಿಸಲಾಗಿಲ್ಲ ಮತ್ತು ಹಾಗಾಗಿ, ಪ್ರಶ್ನಿತ ಆದೇಶವು, ಗಮನ ಹರಿಸದೆ ಮಾಡಲಾಗಿರುವುದರಿಂದ ನಿರರ್ಥಕವಾಗಿದೆ ಎಂದು ನಿವೇದಿಸಿಕೊಳ್ಳಲಾಗಿದೆ.

10. ಇದಕ್ಕೆ ವಿರುದ್ಧವಾಗಿ, ಜೀವನ ನಿರ್ವಹಣಾ ಭತ್ಯೆಯನ್ನು ನಿರಾಕರಿಸುವುದು ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುವುದು ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರ್ಣಯಿಸಿದಂತೆ, ಅಪೀಲು ನ್ಯಾಯಾಧಿಕರಣವು ಅರ್ಜಿಯನ್ನು ನಿರಾಕರಿಸುವಲ್ಲಿ ಸರಿಯಾದ ಕ್ರಮವನ್ನೇ ಅನುಸರಿಸಿದೆ ಎಂದು ಆಕ್ಷೇಪಕರ ಪರ

ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ. ಅದು ಏನೇ ಇರಲಿ, ಅಪೀಲು ನ್ಯಾಯಾಧಿಕರಣವು, ಇದರಲ್ಲಿನ ಅಪೀಲುದಾರ/ಅರ್ಜಿದಾರರು ಅವಲಂಬಿಸಿದ ತೀರ್ಪನ್ನು ಪರಿಗಣಿಸದೆ ಇರುವಲ್ಲಿ ತಪ್ಪೆಸಗಿದೆ. ಇದು ಅಪೀಲು ನ್ಯಾಯಾಧಿಕರಣದ ಪೂರ್ವಾಧಿಯಾಗಿತ್ತು ಮತ್ತು ಅದು ಅವುಗಳ ಕಡೆಗೆ ಗಮನ ಹರಿಸಲು ಬದ್ಧವಾಗಿತ್ತು ಹಾಗೂ ಕಾರಣಗಳನ್ನು ನಿರೂಪಿಸಿ, ಆ ತರುವಾಯ ಆದೇಶಗಳನ್ನು ಹೊರಡಿಸಬೇಕಾಗಿತ್ತು.

11. ಅಪೀಲು ನ್ಯಾಯಾಧಿಕರಣದ ಮುಂದೆ ಸದರಿ ತೀರ್ಪನ್ನು ಮಂಡಿಸಲಾಗಿತ್ತು ಎಂದು ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ನ್ಯಾಯಯುತವಾಗಿಯೇ ಒಪ್ಪಿಕೊಂಡಿದ್ದಾರೆ; ಹಾಗಾಗಿ, ಪ್ರಸ್ತುತ ಮೊಕದ್ದಮೆಯಲ್ಲಿನ ಪ್ರಶ್ನಿತ ಆದೇಶವನ್ನು ಸಕಾರಣವಿಲ್ಲದ ಆದೇಶವನ್ನಾಗಿಸಿದೆ. ಆದ್ದರಿಂದ, ಪ್ರಶ್ನಿತ ಆದೇಶವನ್ನು ತಳ್ಳಿಹಾಕಬೇಕಾದ ಅಗತ್ಯವಿದೆ.

ತದನುಸಾರವಾಗಿ, ರಿಟ್ ಅರ್ಜಿಯನ್ನು ಭಾಗಶಃ ಅನುಮತಿಸಲಾಗಿದೆ. ವಿಷಯವನ್ನು, ಕರ್ನಾಟಕ ಅಪೀಲು ನ್ಯಾಯಾಧಿಕರಣಕ್ಕೆ ಮರಳಿ ಕಳುಹಿಸಲಾಗಿದೆ. ಐ.ಎ. ಸಂಖ್ಯೆ: 1ರಲ್ಲಿ ಹೊರಡಿಸಿದ ದಿನಾಂಕ: 19.11.2018ರ ಆದೇಶವನ್ನು ರದ್ದುಗೊಳಿಸಲಾಗಿದೆ. ವಿಷಯವನ್ನು ಹೊಸದಾಗಿ ಪರ್ಯಾಲೋಚಿಸಿ, ಪಕ್ಷಕಾರರು ಅವಲಂಬಿಸಿದ ತೀರ್ಪುಗಳನ್ನು ಪರಿಶೀಲಿಸಿದ ನಂತರ ಆದೇಶಗಳನ್ನು ಹೊರಡಿಸುವುದಕ್ಕಾಗಿ ಕರ್ನಾಟಕ ಅಪೀಲು ನ್ಯಾಯಾಧಿಕರಣಕ್ಕೆ ಮರಳಿ ಕಳುಹಿಸಲಾಗಿದೆ. ಅರ್ಜಿದಾರ–ಅಪೀಲುದಾರರು ಯಾವುದೇ ಮೊತ್ತವನ್ನು ಠೇವಣಿ ಇಟ್ಟಿದ್ದಕ್ಕಾಗಿ ಅರ್ಜಿಯನ್ನು ಸಲ್ಲಿಸಿದ ಸಂದರ್ಭದಲ್ಲಿ, ಅದನ್ನು ಸಹ ಕಾನೂನಿಗನುಗುಣವಾಗಿ ಪರ್ಯಾಲೋಚಿಸತಕ್ಕದ್ದು.

ರಿಟ್ ಅರ್ಜಿಗಳನ್ನು ಕುರಿತು ತದನುಸಾರವಾಗಿ ಆದೇಶಿಸಲಾಗಿದೆ.